ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) ;

ಅ) ರಾಣೆಬೆನ್ನೂರು ನಗರದ ಕುದ್ರಿಹಾಳನಲ್ಲಿರುವ ಪಂಪು ಸೆಟ್ಟುಗಳಿಗೆ 28.5 ಕೆ.ವಿ.ಎ. ಜನರೇಟರ್ ಮತ್ತು ಇತರೆ ಸಲಕರಣೆಗಳ ಕಾಮಗಾರಿ ಕೆಲಸಕ್ಕೆ ಈಗಾಗಲೇ ಟೆಂಡರ್ ಕರೆಯಲಾಗಿದೆ. ತುಂಬಿದ ಟೆಂಡರ್ ಫಾರಂಗಳನ್ನು ಸ್ವೀಕರಿಸಲು 7.3.96 ರಂದು ಕೊನೆ ದಿವಸವನ್ನಾಗಿ ನಿಗಧಿಪಡಿಸಲಾಗಿದೆ. ಮೇಲ್ಕಂಡ ಕಾಮಗಾರಿಯನ್ನು 1996ಮಾರ್ಚ ತಿಂಗಳ ಕೊನೆಯೊಳಗೆ ಮುಗಿಸಲುಯೋಜಿಸಲಾಗಿದೆ.

ಸರ್ಕಾರದ ಸ್ವಾಮ್ಯದಲ್ಲಿರುವ ವಿಕ್ರಾಂತ್ ಟೈರ್ಸ್ ಕಂಪನಿಯ ಮಾರಾಟ

502- ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ತನ್ನ ಸ್ವಾಮ್ಯದಲ್ಲಿರುವ ವಿಕ್ರಾಂತ್ ಟಯರ್ಸ ಕಂಪನಿಯನ್ನು ಮಾರಾಟ ಮಾಡಲು ನಿಶ್ಚಯಿಸಿದೆಯೇ? ಇದುವರೆವಿಗೂ ಯಾವ ಯಾವ ಕಂಪನಿಗಳು ಮುಂದೆ ಬಂದಿವೆ?

ಆ) ಪ್ರಸ್ತುತ ಈ ಕಂಪನಿಯಲ್ಲಿರುವವುಗಳು ಯಾವುವು ಎಷ್ಟು ಇವೆ?

ಇ) ಕಂಪನಿಯು ಕಳೆದ 5 ವರ್ಷಗಳಲ್ಲಿ ಯಾವ ಯಾವ ವರ್ಷ ಎಷ್ಟು ಎಷ್ಟು ಲಾಭ ಮಾಡಿದೆ ಹಾಗೂ ಯಾವ ಯಾವ ವರ್ಷ ಎಷ್ಟು ಎಷ್ಟು ನಷ್ಟ ಅನುಭವಿಸಿದೆ?

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) 1992ರ ನಂತರ ಸರ್ಕಾರದ ಸ್ವಾಮ್ಯದ ಕಂಪನಿ ಮತ್ತು ನಿಗಮಗಳ ಷೇರು ಬಂಡವಾಳ ವಿಕ್ರಾಂತ್ ಟಯರ್ಸ್ ನಿಯಮಿತದಲ್ಲಿ ಶೇ. 51ಕ್ಕಿಂತ ಕಡಿಮೆಯಾಗಿದೆ. ತತ್ಪರಿಣಾಮವಾಗಿ ವಿಕ್ರಾಂತ್ ಟಯರ್ಸ ನಿಯಮಿತವು ಸರ್ಕಾರದ ಕಂಪನಿಯಾಗಿರುವುದಿಲ್ಲ. ಈಗ ಕರ್ನಾಟಕ ಸರ್ಕಾರವು ತಾಂತ್ರಿಕ ಸಹಭಾಗಿತ್ವಕ್ಕೆ ಹೊಸದಾಗಿ ಬಂಡವಾಳ ಹೂಡುವ ಹಾಗೂ ಇತ್ತೀಚಿನ ತಾಂತ್ರಿಕತೆಯನ್ನು ಅಳವಡಿಸಲು ಪಾಲುದಾರರನ್ನು ತರಲು ಯೋಜಿಸಿದೆ. ಈ ಉದ್ದೇಶಕ್ಕಾಗಿ ಸರ್ಕಾರವು ಕೆ.ಎಸ್.ಐ.ಐ.ಡಿ.ಸಿ ಯನ್ನು ನೋಡಲ್ ಎಜನ್ಸಿಯಾಗಿ ನೇಮಿಸಿದೆ. ಕೆ.ಎನ್.ಐ.ಡಿ.ಸಿ.ಯು ಬಂಡವಾಳ ಹಿಂತೆಗೆದುಕೊಳ್ಳುವುದೆಂಬಂತೆ ಅರ್ಥೈಸುತ್ತದೆ.

ಆ) ಇಲ್ಲ.

ಇ) ಕಳೆದ 5 ವರ್ಷಗಳಲ್ಲಿ ಕಂಪನಿಯು ಗಳಿಸಿದ ಲಾಭ : ನಷ್ಟ ಈ ಕೆಳಗಿನಂತಿದೆ.

ಲಾಭ		ನಷ್ಟ	
		(ಕೋಟಿ ರೂ.ಗಳಲ್ಲಿ)	
1990-91	7.33	1992-93	6.37
1991-92	12.77	1993-94	3.60
		1994-95	9.21